ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಅಧೀಕ್ಷಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ವೃತ್ತ, ನವನಗರ, ಬಾಗಲಕೋಟ–02
Tel: 08354/297330, Mob No- 9449877676

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O & M Circle, Navanagar, Bagalkot-02
E-mail ID: seebgkt.hescom@gmail.com
dcabgkt.hescom@gmail.com

Corporate Identity Number(CIN): U31401KA2002SGC030437

ಕ್ರ.ಸಂ:ಬಿಜಕೆ/ಅಇಂ(ವಿ)/ಉಲೆನಿ/ಸಲೆ/ಹಿಸ–1/2020–21/14123-14127 ದಿನಾಂಕ: 6 JAN 2021

:ನಡಾವಳಿಗಳು:

ದಿನಾಂಕ: 29.12.2020 ರಂದು ಬೆಳಿಗ್ಗೆ 11.00 ಘಂಟೆಗೆ ಶ್ರೀ ಕಾಶೀನಾಥ. ಹಿರೇಮಠ, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟ ರವರ ಅಧ್ಯಕ್ಷತೆಯಲ್ಲಿ ಬಾಗಲಕೋಟ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸಭೆಯ ನಡಾವಳಿಗಳು.

ಹಾಜರಿದ್ದವರು:1) ಶ್ರೀ ಸಿ ವ್ಹಿ ಶಿವಪೂಜಿ, ಸದಸ್ಯರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಬಾಗಲಕೋಟ.
2) ಶ್ರೀ ನಾರಾಯಣ ಕಳ್ಳಿಮನಿ, ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟ.
3) ಶ್ರೀ ವಿಶಾಲ ಧರೆಪ್ಪಗೊಳ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ಇಲಕಲ್ಲ.
4) ಶ್ರೀ. ಆನಂದ ಕೃಷ್ಣಾ ಮನ್ನಾಪೂರ ಸಾ॥ಇಲಕಲ್ಲ. ಹಾಗೂ ಪ್ರತಿನಿಧಿ: ಶ್ರೀ. ತುಷಾರ ಎಮ್ ಬಡ್ಡಿ, ಹುಬ್ಬಳ್ಳಿ.

<u>ಪ್ರಕರಣ ಸಂಖ್ಯೆ: 05/2020</u>

ಶ್ರೀಮತಿ. ನಂದಾ ಆನಂದ ಮನ್ನಾಪೂರ ಹಾಗೂ
ಆನಂದ ಕೃಷ್ಣಾ ಮನ್ನಾಪೂರ
ಪ್ರತಿನಿಧಿ: ಶ್ರೀ. ತುಷಾರ ಎಮ್ ಬಡ್ಡಿ, ಹುಬ್ಬಳ್ಳಿ
} ------- ದೂರುದಾರರು.

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಹುವಿಸಕಂನಿ.,
ಇಲಕಲ್ಲ.
} ------- ಪ್ರತಿವಾದಿ

**ವಿಷಯ: "ಸ್ಥಾವರ ಸಂಖ್ಯೆ:ಐ.ಎಲ್.ಕೆ.ಹೆಚ್.ಟಿ–97 ರ ವಿದ್ಯುತ್ ಸಂಪರ್ಕ ಕಡಿತಗೊಳಿಸಿರುವ ಕುರಿತು."**

*&*&*

ಪ್ರಕರಣ ಸಂಖ್ಯೆ: 05/2020 ರಕ್ಕೆ ಸಂಬಂಧಿಸಿದಂತೆ, ದಿನಾಂಕ:29.12.2020 ರಂದು ಬೆಳಿಗ್ಗೆ 11.00 ಘಂಟೆಗೆ ಶ್ರೀ **ಕಾಶೀನಾಥ. ಹಿರೇಮಠ**, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟ ರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರು/ ಅಧಿಕಾರಿಗಳು/ ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

<u>ಶ್ರೀಮತಿ. ನಂದಾ ಆನಂದ ಮನ್ನಾಪೂರ ಹಾಗೂ ಆನಂದ ಕೃಷ್ಣಾ ಮನ್ನಾಪೂರ ರವರ ಹೇಳಿಕೆ :</u>

ವಿಶಾಲ್ ಧರೆಪ್ಪಗೋಳ ದಿನಾಂಕ:18–11–2020 ರಂದು ಗೊರಬಾಳ ಗ್ರಾಮ ಪಂಚಾಯತ ವ್ಯಾಪ್ತಿಯ ತೊಂಡಿಹಾಳ ಗ್ರಾಮದ **ಕೈಗಾರಿಕ ಪ್ಲಾಟ್ ನಂ:02 ರಿ.ಸ.ನಂ:67/2, ಆಸ್ತಿ ಸಂಖ್ಯೆ:4163 ಸ್ವತ್ತಿನ ಸಂಖ್ಯೆ:150100401200121713** ರಲ್ಲಿರುವ ಸ್ಥಾವರ ಸಂಖ್ಯೆ:ಐ.ಎಲ್.ಕೆ.ಹೆಚ್.ಟಿ–97 ಇದನ್ನು ಗ್ರಾಮ ಪಂಚಾಯತ ಗೊರಬಾಳ ರವರ ಪತ್ರ ಸಂಖ್ಯೆ:ಗ್ರಾ.ಪಂ.ಗೊ/ಸಿ.ಪ್ರ ಪತ್ರ ರದ್ದುಪಡಿಸು/2020–21 ದಿನಾಂಕ:12–10–2020 ರಂದು ಹಾಗೂ ಇಲಕಲ್ಲ ಕೋ–ಆಪರೇಟಿವ್ ಬ್ಯಾಂಕ್ ಲಿ, ಇಲಕಲ್ಲ ಪತ್ರ ಸಂಖ್ಯೆ:1213 ದಿನಾಂಕ:30–09–2020 ರಂದು ನೀಡಿದ ಪತ್ರಕ್ಕೆನುಗುಣವಾಗಿ ಈ ಸದರೀ ಸ್ಥಾವರಕ್ಕೆ ಸಂಬಂಧಿಸಿದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದ್ದು ಇರುತ್ತದೆ. ಆದ್ದರಿಂದ ನಾವು ನಿಮ್ಮಲ್ಲಿ ಈ ಫಿರ್ಯಾದಿಯನ್ನು ಸಲ್ಲಿಸುತ್ತದ್ದೇವೆ.

1. ಗೊರಬಾಳ ಗ್ರಾಮ ಪಂಚಾಯತಿಯ ತೊಂಡಿಹಾಳ ಗ್ರಾಮದ **ಕೈಗಾರಿಕಾ ಪ್ಲಾಟ ನಂ:02 ರಿ.ಸ.ನಂ:67/2 ಆಸ್ತಿ ಸಂಖ್ಯೆ:4163 ಸ್ವತ್ತಿನ ಸಂಖ್ಯೆ:150100401200121713** ಇದು ಶ್ರೀಮತಿ. ನಂದಾ ಆನಂದ ಮನ್ನಾಪೂರ ಇವರ ಹೆಸರಲ್ಲಿ ಇದ್ದು, ಇದನ್ನು ಮಾನ್ಯ ಪ್ರಧಾನ ದಿವಾನಿ ನ್ಯಾಯಾಧೀಶರ ನ್ಯಾಯಾಲಯ ಹುನಗುಂದ ಇವರಲ್ಲಿ ಅಸಲು ದಾವಾ ನಂ:75/2017 ನೇದ್ದರಲ್ಲಿ ಆದಂಥ ಲೋಕ ಅದಾಲತ್ ಡಿಕ್ರಿ ಪ್ರಕಾರ ಆನಂದ .ಕೃಷ್ಣಾ.

ಮನ್ನಾಪೂರ ಇವರಿಗೆ ದಿನಾಂಕ:08-04-2017 ರಂದು ವರ್ಗಾವಣೆಯಾಗಿರುತ್ತದೆ. ಈ ಆದೇಶದ ಮೇಲೆ ನಾವು ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ ಗೊರಬಾಳ ಇವರಿಗೆ ಸದರೀ ಆಸ್ತಿಯಲ್ಲಿ ಹೆಸರು ಬದಲಾವಣೆ ಮಾಡಲು ಅರ್ಜಿಯನ್ನು ಸಲ್ಲಿಸಿದರೂ ಅವರು ಅದಕ್ಕೆ ಯಾವುದೇ ರೀತಿ ಸ್ಪಂದಿಸಿರುವದಿಲ್ಲ. ಈ ಮಧ್ಯೆ ಈ ಮೇಲೆ ಹೇಳಿದ ಅಸಲು ದಾವಾ ಸಂ:75/2017 ರ ಮೇಲೆ ಇಲಕಲ್ಲ ಕೋ-ಆಪರೇಟಿವ್ ಬ್ಯಾಂಕ್ ಲಿ., ಇಲಕಲ್ಲ ಇವರು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ ಧಾರವಾಡ ಪೀಠದಲ್ಲಿ WP No:110441/2018 ರಲ್ಲಿ ಪ್ರಶ್ನಿಸಿ **" ಮಧ್ಯಂತರ ತಡೆಯಾಜ್ಞೆ "** ಆದೇಶವನ್ನು ಪಡೆದುಕೊಂಡಿದ್ದು ಇರುತ್ತದೆ. ಈಗ ಸದರೀ ಆಸ್ತಿಗಳ ವಿವಾದ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ ಧಾರವಾಡ ಪೀಠದಲ್ಲಿರುತ್ತದೆ. ಇನ್ನು ಈ WP No:110441/2018 ಚಾಲ್ತಿಯಲ್ಲಿರುತ್ತದೆ.

2. ವಸ್ತು ಸ್ಥಿತಿ ಹೀಗಿದ್ದಾಗ ಯಾವುದೇ ಬ್ಯಾಂಕಿನ ಅಧಿಕಾರಿಯಾಗಲಿ ಅಥವಾ ಸಾರ್ವಜನಿಕರಾಗಲಿ ಸದರೀ ರಿಟ್ ಅರ್ಜಿ ಇನ್ನೂ ಚಾಲ್ತಿಯಲ್ಲಿರುವಾಗ ಕಾನೂನು ಬಾಹಿರವಾಗಿ ಸ್ವತ್ತು ಹಸ್ತಾಂತರ ವರ್ಗಾವಣೆ ಮಾಡುವುದು, ಮಾರಾಟ ಮಾಡುವುದು ಹಾಗೂ ಸದರೀ ಆಸ್ತಿಯ ಲೈಸೆನ್ಸ್ ಆಗಲೀ ಅಥವಾ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ರದ್ದುಪಡಿಸುವದಾಗಲಿ "ಅಧಿನಿಯಮ ಕಲಂ-52(Lis Pendens)" ರ ಆಶಯಕ್ಕೆ ವಿರೋಧವಾಗಿರುತ್ತದೆ. ಇದನ್ನು ಪರಿಗಣಿಸದೇ ಸದರೀ ಆಸ್ತಿಗಳ ಮೇಲೆ ಯಾವುದೇ ಕೃತ್ಯ ಎಸಗಿದರೆ ಅದು **" ನ್ಯಾಯಾಲಯದ ನಿಂದನೆ "** ಎಂದು ಪರಿಗಣಿಸಲ್ಪಡುತ್ತದೆ.

3. ಆದಾಗ್ಯೂ ಕೂಡಾ ಸದರೀ ಬ್ಯಾಂಕಿನವರು ಈ ವಿಷಯವನ್ನು ಮರೆ ಮಾಡಿ ಸದರೀ ಆಸ್ತಿಯನ್ನು ತಮ್ಮ ರಿಟ್ ಅರ್ಜಿ ಚಾಲ್ತಿಯಲ್ಲಿಯೇ ಇರುವಾಗ ಕಾನೂನು ಬಾಹಿರವಾಗಿ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು, ಬಾಗಲಕೋಟ ಇವರಿಂದ ಕ್ರಎಆರ್-06/ಇಎಕ್ಸ್ಎನ್/ ಸಿಇಪಿ ಸಂಖ್ಯೆ-215/15-16,2016/15-16 ದಿನಾಂಕ:19-03-2016 ಸಿ.ಆರ್/2018-19 ದಿನಾಂಕ:06-08-2018 ರಂದು ಅಕ್ರಮವಾಗಿ ಸ್ವತ್ತು ಹಸ್ತಾಂತರ ವರ್ಗಾವಣೆಯ ಆದೇಶವನ್ನು ಪಡೆದುಕೊಂಡಿರುತ್ತಾರೆ.

4. ಈ ವಿಷಯಕ್ಕೆ ಸಂಬಂಧಪಟ್ಟಂತೆ, ನಾವು ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿ ಕಾರ್ಯಾಲಯ, ಗೊರಬಾಳ ಇವರಿಗೆ ಪಂಚಾಯತಿ ಉತಾರೆಯಲ್ಲಿ ಸದರೀ ಬ್ಯಾಂಕಿನವರ ಹೆಸರಿನಲ್ಲಿ ಆಸ್ತಿ ವರ್ಗಾವಣೆ ಮಾಡದಿರಲು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ ಧಾರವಾಡ ಪೀಠದಲ್ಲಿರುವ WP No:110441/2018 ರ ಮಧ್ಯಂತರ ತಡೆಯಾಜ್ಞೆಯ ನಕಲು ಪ್ರತಿಯೊಂದಿಗೆ ಆಕ್ಷೇಪಣಾ ಪತ್ರವನ್ನು ದಿನಾಂಕ:01-10-2018 ರಂದು ಸಲ್ಲಿಸಿರುತ್ತೇನೆ. ಆದಾಗ್ಯೂ ಕೂಡಾ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸದರೀ ಬ್ಯಾಂಕಿನವರು ಒಬ್ಬರಿಗೊಬ್ಬರು ಮಿಲಾಪಿಯಾಗಿ ನಮಗೆ ಒಂದು ನೋಟಿಸ್ ಕೂಡ ನೀಡದೇ ಅಕ್ರಮವಾಗಿ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ ಧಾರವಾಡ ಪೀಠದಲ್ಲಿರುವ **"ಮಧ್ಯಂತರ ತಡೆಯಾಜ್ಞೆ"** (Interim stay order) ಚಾಲ್ತಿಯಲ್ಲಿರುವಾಗೇ ಧಿಕ್ಕರಿಸಿ ಕಾನೂನು ಬಾಹಿರವಾಗಿ ತಮ್ಮ ಹೆಸರಿನಲ್ಲಿ ಸದರೀ ಆಸ್ತಿಯನ್ನು ವರ್ಗಾವಣೆ ಮಾಡಿಕೊಂಡಿರುತ್ತಾರೆ. ಈ ಎಲ್ಲ ಕಾನೂನು ಬಾಹಿರ ಕೃತ್ಯಗಳ ಮೇಲೆ ನಾವು ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹುನಗುಂದ ಇವರಲ್ಲಿ **ಅಸಲು ದಾವಾ 607/2019** ದಾಖಲಿಸಿದ್ದು ಅದು ಇನ್ನು ಚಾಲ್ತಿಯಲ್ಲಿ ಇರುತ್ತದೆ.

5. ಹೀಗಿದ್ದಾಗ ಇಲಕಲ್ಲ ಕೋ-ಆಪರೇಟಿವ್ ಬ್ಯಾಂಕ್ ಲಿ., ಇಲಕಲ್ಲ ಇವರು ನಮಗೆ ತೊಂದರೆ ಕೊಡುವ ಉದ್ದೇಶದಿಂದ ಗ್ರಾಮ ಪಂಚಾಯತ ಗೊರಬಾಳ ಇವರಿಗೆ ಪತ್ರ ಸಂಖ್ಯೆ:1250 ದಿನಾಂಕ:05-10-2020 ರಂದು ಈ ಮೇಲಿನ ಆಸ್ತಿಯೂ ನಮ್ಮ ಮಾಲ್ಕಿಯಲ್ಲಿರುವದರಿಂದ ಅದರಲ್ಲಿರುವ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಬೇಕೆಂದು ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಅದರಂತೆ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ ಗೊರಬಾಳ ಇವರು ಅವರೊಂದಿಗೆ ಮಿಲಾಪೆಯಾಗಿ ನಮಗೆ ನೀಡಿದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನಮಗೆ ಯಾವುದೇ ನೋಟಿಸ ನೀಡದೇ ಹಿಂಪಡೆದು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಇವರಿಗೆ ಪತ್ರ ಸಂಖ್ಯೆ:ಗ್ರಾ.ಪಂ/ಗೊ/ನಿ.ಪ್ರ. ಪತ್ರ ರದ್ದುಪಡಿಸು/2020-21 ದಿನಾಂಕ:12-10-2020 ರ ಅನುಗುಣವಾಗಿ ನಿರಾಕ್ಷೇಪಣಾ ಪತ್ರವನ್ನು ರದ್ದುಪಡಿಸಿ ಸದರ ಆಸ್ತಿಯ ವಿದ್ಯುತ್ ಸಂಪರ್ಕವನ್ನು ಸ್ಥಗಿತಗೊಳಿಸಬೇಕೆಂದು ವಿನಂತಿಸಿಕೊಂಡಿದ್ದು ಇರುತ್ತದೆ.

6. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಇವರ ನೋಟಿಸ್ ಸಂಖ್ಯೆ:ಇಲಕಲ್ಲ/ಸಕಾನಿಇಂ(ವಿ)/ಸಲೆ/ಕ-/2020-21/1814-16 ದಿನಾಂಕ:22-10-2020 ರಂದು ನಮಗೆ ನೋಟಿಸ್ ನೀಡಿದ್ದು ಅದರ ಪ್ರಕಾರ ಗೊರಬಾಳ ಗ್ರಾಮ ಪಂಚಾಯತ ಕಾರ್ಯಾಲಯದಿಂದ ನೀಡಿದ ವಿದ್ಯುತ್ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಹಿಂಪಡೆದಿರುವ ಪ್ರಯುಕ್ತ ಸಕ್ಷಮ ಪಂಚಾಯತ ಕಾರ್ಯಾಲಯದಿಂದ ನೀಡಿದ ವಿದ್ಯುತ್ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಹಿಂಪಡೆದಿರುವ ಪ್ರಯುಕ್ತ ಸಕ್ಷಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಂದ ಹೊಸ ವಿದ್ಯುತ್ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಪಡೆದು 15 ದಿನಗಳೊಳಗಾಗಿ ನಿಮಗೆ ಸಲ್ಲಿಸುವಂತೆ ನೋಟಿಸ ನೀಡಿದ್ದು ಇರುತ್ತದೆ. ಆದರೆ ಸದರೀ ನೋಟಿಸ್ ನಮಗೆ ದಿನಾಂಕ:05-11-2020 ರಂದು ಮುಟ್ಟಿದ್ದು ಇರುತ್ತದೆ. ಅಲ್ಲಿಂದ ನಾವು ಹೊಸ ವಿದ್ಯುತ್ ನಿರಾಕ್ಷೇಪಣಾ ಪ್ರಮಾಣ ಪತ್ರ ಪಡೆಯಲು ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ ಗೊರಬಾಳ ಇವರಿಗೆ ದಿನಾಂಕ:09-11-2020 ರಂದು ಅರ್ಜಿಯನ್ನು ಸಲ್ಲಿಸಿದ್ದು ಸಹ ಇರುತ್ತದೆ. ಇದರ ನಕಲು ಪ್ರತಿಯನ್ನು ಸಹ ಸಲ್ಲಿಸಿರುತ್ತೇವೆ.

7. ಸದರೀ ನೋಟಿಸನಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಇವರು ನಮಗೆ ತೊಂದರೆ ಕೊಡುವ ಉದ್ದೇಶದಿಂದ ತಮ್ಮ ಪತ್ರದ ಉಲ್ಲೇಖ (2) ರಲ್ಲಿ ತಿಳಿಸಿರುವಂತೆ, ಜಂಟಿ ನಿರ್ದೇಶಕರು, ಕೈಗಾರಿಕೆ ಹಾಗೂ ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕ ಕೇಂದ್ರ, ಬಾಗಲಕೋಟ ಇವರ ಪತ್ರ ಸಂಖ್ಯೆ:BGK/DIC/IPO/ELTC/04/2011-12 ವು ಪರವಾನಿಗೆಯ ಪತ್ರವಾಗಿರುವದಿಲ್ಲ. ಇದು ಸಣ್ಣ ಕೈಗಾರಿಕೆಗಳಿಗೆ ಉತ್ತೇಜನಕ್ಕಾಗಿ ನೀಡುವ

ನಾಲ್ಕು ವರ್ಷದ ಅವಧಿಯ ವಿದ್ಯುತ್ ತೆರಿಗೆ ಸುಂಕದಿಂದ ವಿನಾಯಿತಿಯ ಪ್ರಮಾಣ ಪತ್ರವಾಗಿರುತ್ತದೆ. (Certificate Of Exemption Of Electricity Tax Duty) ಇದನ್ನು ನವೀಕರಿಸಲು ಬರುವುದಿಲ್ಲ. ಸದರೀ ಪ್ರಮಾಣ ಪತ್ರದ ನಕಲು ಪ್ರತಿಯನ್ನು ಲಗತ್ತಿಸಿದ್ದೇನೆ.

8. ಈಗ ಸದರೀ ಆಸ್ತಿಯಲ್ಲಿರುವ ವಿದ್ಯುತ್ ಸ್ಥಾವರದ ಸಂಪರ್ಕವನ್ನು ಹಠಾತ್ತನೆ ಸಮಯಾವಕಾಶವನ್ನು ಸಹ ನೀಡದೇ ದಿನಾಂಕ:18-11-2020 ವಿದ್ಯುತ್ ಸರಬರಾಜನ್ನು ಕೆಇಆರ್‌ಸಿ ನಿಯಮಗಳನ್ನು ಧಿಕ್ಕರಿಸಿ ಅಕ್ರಮವಾಗಿ ಸ್ಥಗಿತಗೊಳಿಸಿದ್ದು ಅಕ್ಷಮ್ಯ ಅಪರಾಧವಾಗಿರುತ್ತದೆ. ಸದರೀ ಆಸ್ತಿಯಲ್ಲಿರುವ ಕಾರ್ಖಾನೆಯು "ಕಿರು ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ಯಮವಾಗಿದ್ದು (MSME)" ಅದರಲ್ಲಿರುವ ಗ್ರಾನೈಟ್ ಫ್ಯಾಕ್ಟರಿಯ ಸಂಪೂರ್ಣ ಕೆಲಸ ನಿಂತು ಹೋಗಿದೆ. ಅದರಿಂದ ದಿನಾಲು2 ರಿಂದ 3 ಲಕ್ಷ ರೂಗಳ ವ್ಯವಹಾರ ಕಡಿತಗೊಂಡಿದೆ ಮತ್ತು ಅಲ್ಲಿ ಕೆಲಸ ಮಾಡುವ ಕಾರ್ಮಿಕರಿಗೂ ತುಂಬಾ ನಷ್ಟ ಉಂಟಾಗಿದೆ. ಈ ಮೊದಲೇ ಕಳೆದ 8-9 ತಿಂಗಳಿನಿಂದ ಕೋವಿಡ-19 ಸಲುವಾಗಿ ಸ್ಥಗಿತಗೊಂಡಿದ್ದ ಕಾರ್ಖಾನೆ ಈಗಷ್ಟೇ ತುಂಬಾನೇ ಕಷ್ಟಪಟ್ಟು ಎಲ್ಲಾ ರೀತಿಯ ಕಾರ್ಮಿಕರನ್ನು ಕರೆದು ತಂದು ಕಾರ್ಖಾನೆಯನ್ನು ಪ್ರಾರಂಭಿಸಿದ್ದೆವು. ಅಷ್ಟರಲ್ಲಿ ವಿದ್ಯುತ್ ಕಡಿತಗೊಳಿಸಿದ್ದು ತುಂಬಲಾರದ ನಷ್ಟವಾಗಿದೆ.

9. ಆದ್ದರಿಂದ ತಮ್ಮಲ್ಲಿ ನಮ್ಮ ವಿನಂತಿಪೂರ್ವಕ ಪ್ರಾರ್ಥನೆ ಏನೆಂದರೆ, ನಾವು ನಿಮ್ಮ ನೇರವಾದ ಗ್ರಾಹಕರಾಗಿರುವದರಿಂದ ನಮ್ಮಿಬ್ಬರ ಮಧ್ಯೆ ಆದಂತ ಒಡಂಬಡಿಕೆಯ ಅಂತ್ಯಗೊಳಿಸುವವರೆಗೂ (Termination Of Agreement) ಹಾಗೂ ಸದರೀ ಆಸ್ತಿಯ ವ್ಯಾಜ್ಯವು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿರುವದರಿಂದ, ಅಲ್ಲಿಂದ ಯಾವುದೇ ಆದೇಶ ಬರುವವರೆಗೂ ಕಡಿತಗೊಳಿಸಿರುವ ವಿದ್ಯುತ್ ಸ್ಥಾವರ ಸಂಖ್ಯೆ:ಐಎಲ್‌ಕೆಹೆಚ್‌ಟಿ-97 ವಿದ್ಯುತ್ ಸರಬರಾಜನ್ನು ಮರಳಿ ಪುನಃ ಸ್ಥಾಪಿಸಬೇಕೆಂದು ಹಾಗೂ ನಮಗೆ ಆದಂತಹ ಸುಮಾರು **ರೂ.10,00,000=00(ಹತ್ತು ಲಕ್ಷ ರೂಪಾಯಿಗಳು ಮಾತ್ರ)** ರೂಪಾಯಿಗಳಷ್ಟು ನಷ್ಟವನ್ನು ಪರಿಹಾರವಾಗಿ ವಿಶಾಲ್ ಧರೆಪ್ಪಗೋಳ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಹೆಸ್ಕಾಂ ಇಲಕಲ್ಲ ಇವರಿಗೆ ನೀಡಲು ಈ ಮೂಲಕ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ ಇಲಕಲ್ಲ ರವರ ಹೇಳಿಕೆ :**

ಗೊರಬಾಳ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಸರ್ವೇ ನಂ:4163/67/ಇ ತಮ್ಮ ಹೆಸರಿನಲ್ಲಿ ಶ್ರೀಮತಿ. ನಂದಾ ಆನಂದ. ಮನ್ನಾಪೂರ, ಮೇಃ ಮನ್ನಾಪೂರ ಗ್ರಾನೈಟ್ ಇಂಡಸ್ಟ್ರೀಸ್ ಹೆಚ್.ಟಿ ವಿದ್ಯುತ್ ಸ್ಥಾವರ ಸಂಖ್ಯೆ:ಐ.ಎಲ್.ಕೆ.ಹೆಚ್.ಟಿ-97ನ್ನು ಸಹಕಾರ ಸಂಘಗಳ ಸಹಾಯಕ ನಿಂಬಂಧಕರು ಹಾಗೂ ವಸೂಲಾಧಿಕಾರಿಗಳು ಉಪ-ವಿಭಾಗ ಬಾಗಲಕೋಟ ಇವರ ಆದೇಶದಂತೆ ಸರ್ವೇ ನಂ:4163/67/ಇ ರಲ್ಲಿರುವ ಫ್ಯಾಕ್ಟರಿ ಪ್ರಧಾನ ವ್ಯವಸ್ಥಾಪಕರು ಇಲಕಲ್ಲ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಇಲಕಲ್ಲ ರವರ ಹೆಸರಿಗೆ ವರ್ಗಾವಣೆಯಾಗಿರುವದರಿಂದ ಸದರ ಬ್ಯಾಂಕಿನವರು ಸ್ಥಾವರ ಸಂಖ್ಯೆ ಐ.ಎಲ್.ಕೆ.ಹೆಚ್.ಟಿ-97ನ್ನು ವಿದ್ಯುತ್ ಸ್ಥಗಿತಗೊಳಿಸಲು ವಿನಂತಿಸಿಕೊಂಡಿದ್ದು, KERC COS Clause-4.02 ರ ಪ್ರಕಾರ ವಿದ್ಯುತ್ ಸಂಪರ್ಕ ಪಡೆಯಲು Proof Of Ownership of premises or Proof Occupancy Indiminity Bond if applicant is not the owner of premises ಅವಶ್ಯವಿರುತ್ತದೆ. ತಮ್ಮ ಹೆಸರಿನಲ್ಲಿರುವ ವಿದ್ಯುತ್ ಸ್ಥಾವರದ ಜಾಗೆ/ಆಸ್ತಿಯು ಪ್ರಧಾನ ವ್ಯವಸ್ಥಾಪಕರು ಇಲಕಲ್ಲ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಇಲಕಲ್ಲ ರವರ ಹೆಸರಿಗೆ ವರ್ಗಾವಣೆಯಾಗಿರುವದೆಂದು ಈ ಕಛೇರಿ ಗಮನಕ್ಕೆ ಬಂದಿರುತ್ತದೆ. ಆದ ಕಾರಣ ಈ ಪತ್ರ ತಲುಪಿದ 3 ದಿನಗಳೊಳಗಾಗಿ ಸದರೀ ಸ್ಥಾವರದ ಜಾಗೆ/ಆಸ್ತಿಯ ಪ್ರಸ್ತುತ ತಮ್ಮ ಹೆಸರಿನಲ್ಲಿರುವ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಿ ಈ ಕಛೇರಿ ಪತ್ರ ಸಂಖ್ಯೆ:ಇಲಕಲ್ಲ/ಸಕಾನಿಅ(ವಿ)/ಸಲೆ/ಕ-/1721-23 ದಿನಾಂಕ:09-10-2020 ರಡಿಯಲ್ಲಿ ಪತ್ರ ಬರೆಯಲಾಗಿತ್ತು. ತದ ನಂತರ ಈ ಕಛೇರಿ ನೋಟಿಸ್ ಪತ್ರ ಸಂಖ್ಯೆ: ಇಲಕಲ್ಲ/ಸಕಾನಿಅ(ವಿ)/ಸಲೆ/ಕ-/1814-16 ದಿನಾಂಕ:22-10-2020 ನೋಟಿಸ್ ಜಾರಿ ಮಾಡಲಾಗಿತ್ತು.

ಮುಂದುವರೆದು ಸದರೀ ಗ್ರಾಹಕರು ಯಾವುದೇ ದಾಖಲಾತಿಗಳನ್ನು ಸಲ್ಲಿಸದೇ ಇರುವದರಿಂದ ಸದರೀ ಸ್ಥಾವರ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿದೆ ಎಂದು ತಿಳಿಸಿದರು.

1) ಸಹಾಯಕ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿಗಳು ಬಾಗಲಕೋಟ ಉಪವಿಬಾಗ ಬಾಗಲಕೋಟ ಇವರ ಕಛೆರಿಯ ನಡುವಳಿಕೆಗಳ ಆದೇಶ ದಿನಾಂಕ 0608.2018 ರ ಅನುಸಾರ ಆಸ್ತಿ ವರ್ಗಾವಣೆ ಆಗಿರುತ್ತದೆ.
2) ಪ್ರಧನ ವ್ಯವಸ್ತಾಪಕರು ಕೋ ಅಪರೇಟಿವ ಬ್ಯಾಂಕ ಲಿಮಿಟೆಡ ಮುಖ್ಯ ಕಛೆರಿ ಇಲಕಲ್ಲ ಇವರ ಪತ್ತ ಸಂಖ್ಯೆ 1213 ದಿನಾಂಕ.30.09.2020 ರಲ್ಲಿ ಆರ್ ಆರ್ ನಂಬರ ಆಯ್‌ಎಲ್‌ಕೆಎಚ್‌ಟಿ.-97 ರ **ಸ್ಥಾವರ** ವಿದ್ಯುತ್ ಸಂಪರ್ಕ ಕಡಿತಗೂಳಿಸಲು ವಿನಂತಿಸಿರುವರು.
3) ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ ಗೊರಬಾಳ ರವರ ಪತ್ರ ದಿನಾಂಕ.12.10.2020 ರ ತೊಂಡಿಹಾಳ ಗ್ರಾಮದ ಕೈಗಾರಿಕಾ ಕಲ್ಲು ಕೊರೆಯುವ ಪ್ಯಾಕ್ಟರಿಯ **ಸ್ಥಾವರ** ವಿದ್ಯುತ್ ಸಂಪರ್ಕ ಕಡಿತಗೂಳಿಸಲು ವಿನಂತಿಸಿರುವರು.
4) ಕೆ.ಇ.ಆರ್.ಸಿ. ನಿಯಮ 7.1 ರ ಅನುಸಾರ ಕ್ರಮ ಕೈಗೂಳಲಾಗಿದೆ.

**ಮೇಲಿನ ಅಂಶಗಳನ್ನು ಪರಿಶೀಲಿಸಿ**

4 ಸದರಿ ವಾದಿ ಪ್ರತಿವಾದಿಗಳ ಹೇಳಿಕೆಗಳನ್ನು ಆಲಿಸಿ, ಮಾನ್ಯ ವೇದಿಕೆಯು ಈ ಕೆಳಗಿನಂತೆ ಆದೇಶ ನೀಡಲಾಗಿದೆ.

: ಆ ದೇ ಶ :

ಕ್ರ.ಸಂ:ಬಜಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2020-21/ 14123-14127 ದಿನಾಂಕ: 6 JAN 2021

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ ಇಲಕಲ್ಲ ಇವರು ಸದರೀ ಸ್ಥಾವರ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದನ್ನು ಸಮರ್ಥಿಸಲಾಗಿದೆ. ಸದರೀ ಪ್ರಕರಣ ಮುಕ್ತಾಯಗೊಳಿಸಿ ಆದೇಶಿಸಿದೆ.

ಶ್ರೀ ಸಿ ವ್ಹಿ ಶಿವಪೂಜಿ, ಸದಸ್ಯರು,
ಗ್ರಾ.ಕುಂ.ಕೊ.ನಿ.ವೇ, ಬಾಗಲಕೋಟ.

6/1
ಶ್ರೀಮತಿ ಸರೋಜಿನಿ ಜಿ. ಹಿರೇಮನಿ
ಉಪ-ಲೆಕ್ಕನಿಯಂತ್ರಣಾಧಿಕಾರಿ, ಹಾಗೂ
ಗ್ರಾ.ಕುಂ.ಕೊ.ನಿ.,ವೇದಿಕೆಯ ಸದಸ್ಯರು,
ಬಾಗಲಕೋಟ.

6/1
ಅಧ್ಯಕ್ಷರು,
(ಕೆ ಜಿ ಹಿರೇಮಠ,)
ಅಧೀಕ್ಷಕ ಅಭಿಯಂತರರು(ವಿ)ಬಾಗಲಕೋಟ ಹಾಗೂ ಗ್ರಾಹಕರ
ಕುಂದು ಕೊರತೆ ನಿವಾರಣಾ ವೇದಿಕೆ
ಕಾ ಮತ್ತು ಪಾ ವೃತ್ತ ಹುವಿಸಕಂನಿ.,ಬಾಗಲಕೋಟ.

<u>ಪ್ರತಿಯನ್ನು</u> :

1) ಮುಖ್ಯ ಇಂಜಿನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ. ರವರ ದಯಾಪರ ಮಾಹಿತಿಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ದಯಾಪರ ಮಾಹಿತಿಗಾಗಿ.
3) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟ ರವರ ಮಾಹಿತಿಗಾಗಿ. .
4) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಇಲಕಲ್ಲ ರವರ ಮಾಹಿತಿಗಾಗಿ.
5) ಶ್ರೀಮತಿ. ನಂದಾ ಆನಂದ ಮನ್ನಾಪೂರ ಹಾಗೂ ಆನಂದ ಕೃಷ್ಣಾ ಮನ್ನಾಪೂರ, 67/ಇ ಪ್ಲಾಟ್ ನಂ:02, ತೊಂಡಿಹಾಳ ತಾ:ಇಲಕಲ್ಲ ಜಿ:ಬಾಗಲಕೋಟ. ಮೋ.ನಂ:9972096555 ಹಾಗೂ ಪ್ರತಿನಿಧಿ: ಶ್ರೀ. ತುಷಾರ ಎಮ್ ಬಡ್ಡಿ, ಹುಬ್ಬಳ್ಳಿ.
6) ಕಛೇರಿ ಪ್ರತಿ/ಪ್ರಧಾನ ಕಡತ.